299 ಶ್ರೀ ಕುಮಾರಸ್ವಾಮಿ ಕೆ.ಜಿ.
ಹೆಚ್ ಹಾಲಪ್ಪ(ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು)

1 ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಹೊಳೆಹೊನ್ನೂರು ಹೋಬಳಿ ಹಗರದ ಹಳ್ಳಿ-ಯಡಹಳ್ಳಿ ಭಾಗದ 60-70 ಗೃಹ ಬಳಕೆ ಗ್ರಾಹಕರ ಅನಿಲ ಸಿಲಿಂಡರ್‌ಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗಿದೆಯೆ;

ಹೌದು

2 ಈ ಅನಿಲ ಸಿಲಿಂಡರ್‌ಗಳ ಬಗ್ಗೆ ಗ್ರಾಹಕರು ಬೆಂಗಳೂರಿಗೆ ಜಾತಾ ಬಂದು ಮನವಿ ಸಲ್ಲಿಸಿರುವುದು ನಿಜವೇ;

ಇಲ್ಲ,

ಈ ಬಗ್ಗೆ ಕರ್ನಾಟಕ ಗ್ರಾಹಕ ಪ್ರತಿಷ್ಠಾನ ಮತ್ತು ಮಾಹಿತಿ ಹಕ್ಕು ಮಾರ್ಗದರ್ಶನ ಕೇಂದ್ರದ ಉಪಾಧ್ಯಕ್ಷರು ದಿನಾಂಕ: 10-6-2009 ರಂದು ಮನವಿಯನ್ನು ಸಲ್ಲಿಸಿ ಭದ್ರಾವತಿ ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷರ ನೇತೃತ್ವದಲ್ಲಿ ಗ್ರಾಹಕರು ಖುದ್ದಾಗಿ ಭೇಟಿ ಮಾಡಿ ವಾಸ್ತವಾಂಶವನ್ನು ವಿವರಿಸಲು ಸಮಯಾವಕಾಶ ನೀಡುವಂತೆ ಇಲಾಖೆಯ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಮಾನ್ಯ ಶಾಸಕರು ದಿನಾಂಕ: 23-6-2009 ರಂದು ಇಲಾಖೆಯ ಆಯುಕ್ತರಿಗೆ ಪತ್ರ ಬರೆದು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಅಂತಹ ಗ್ರಾಹಕರಿಗೆ ಹಿಂದಿರುಗಿಸಲು ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು)

ಭದ್ರಾವತಿ ತಾಲ್ಲೂಕು ತಹಶೀಲ್ದಾರ್ ಮತ್ತು ಸಿಬ್ಬಂದಿಯವರು ದಿನಾಂಕ:28-2-2004 ರಂದು ದಾಳಿ ನಡೆಸಿ ವಶಪಡಿಸಿಕೊಳ್ಳಲಾಗಿದ್ದ 127 ಸಿಲಿಂಡರ್‌ಗಳನ್ನು ಸರ್ಕಾರದ ಪರವಾಗಿ ಮುಟ್ಟುಗೋಲು ಹಾಕಿಕೊಳ್ಳುವಂತೆ ಶಿವಮೊಗ್ಗ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಕರ್ನಾಟಕ ಅಗತ್ಯ ವಸ್ತುಗಳ ಕಾಯ್ದೆಯಡಿ ಆದೇಶವನ್ನು ಹೊರಡಿಸಿರುತ್ತಾರೆ. ನ್ಯಾಯಾಲಯದ ತೀರ್ಪಿನನ್ವಯ ಮೇಲ್ಮನವಿ ಸಲ್ಲಿಸಿ ಪರಿಹಾರ ಪಡೆಯಲು ಅವಕಾಶವಿದೆಯೇ ವಿನಃ ಈ ಹಂತದಲ್ಲಿ ಇಲಾಖೆಯಿಂದ ಕ್ರಮ ಜರುಗಿಸಲು ಅವಕಾಶವಿರುವುದಿಲ್ಲ.

162 ಶ್ರೀ ಮಹೇಶ್ ಎಸ್.ಆರ್ (ಕೃಷ್ಣರಾಜನಗರ)
ಹೆಚ್. ಹಾಲಪ್ಪ(ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿರುವ ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)